**CC 10005/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 10005/2024

**ಸಿ ಡಬ್ಲ್ಯೂ** 15
**ಪಿ ಡಬ್ಲ್ಯೂ:** 2

**ಸಾಕ್ಷಿಯ ಹೆಸರು - ಎಸ್ ಪಿ ನಾಯ್ಕ**
**ತಂದೆಯ ಹೆಸರು - ಶೇಖರ್ ನಾಯ್ಕ**
**ವಯಸ್ಸು -** 40 **ವರ್ಷಗಳು**
**ಉದ್ಯೋಗ - ಪಿ ಎಸ್ ಐ ಬೇವೂರು ಪೋಲಿಸ್ ಠಾಣೆ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕ:** 06-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎ. ಪಿ. ಪಿ. ಅವರಿಂದ**

ನಾನು **28-08-2024** ರಿಂದ **16-10-2025** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯ ಅಪರಾಧ ವಿಭಾಗದ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: **20-09-2024** ರಂದು ನಾನು ಠಾಣೆಯಲ್ಲಿದ್ದಾಗ ರಾತ್ರಿ **8.00** ಗಟೆಗೆ ಚಾಸಾ **-1** ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ಸಂಖ್ಯೆ **139/2024** ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸಾಕ್ಷಿ ನಿಪಿ: **1** ರ ದಾಖಲೆ ನೋಡಿ ಗುರುತಿಸಿರುತ್ತಾರೆ . ಸಾಕ್ಷಿಯ ಸಹಿಯನ್ನು ನಿಪಿ: **1**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ: **8** ಎಂದು ಸಾಕ್ಷಿಯ ಸಹಿಯನ್ನು ನಿಪಿ: **8**(ಎ) ಎಂದು ಗುರುತಿಸಲಾಯಿತು. ಸಂಶಯಾತ್ಮಕ ಆರೋಪಿ ಗೌರಮ್ಮ ರವರಿಗೆ ತನಿಖೆಗೆ ಹಾಜರಾಗಲು ನೋಟಿಸ್ ನೀಡಿದ್ದೆ.

**CC 10005/2024**

ದಿಃ **21-09-2024** ರಂದು ಚಾಸಾ **-2** ಮತ್ತು **3** ರವರ ಸಮಕ್ಷಮ ಗುನ್ನಾ ಸ್ಥಳವಾದ ಚಾಸಾ **-1** ರವರ ಮನೆಯಲ್ಲಿ ಬೆಳಿಗ್ಗೆ **11.00** ರಿಂದ ಮಧ್ಯಾಹ್ನ **12.00** ರವರೆಗ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **2** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **2(ಬಿ)** ಎಂದು ಗುರುತಿಸಲಾಯಿರು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **3** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **3(ಬಿ)** ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿಃ **4** ರಲ್ಲಿನ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ **-6** ರಿಂದ **8** ಮತ್ತು **14** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ **-14** ರವರು ನೀಡಿದ ಕಲಂ **63** ಬಿಎಸ್ ಎ ಪ್ರಮಾಣ ಪತ್ರವನ್ನು ಕಡತನಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **9** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **9(ಎ)** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ **-11** ರವರ ಹೇಳಿಕೆ ಪಡೆದಿರುತ್ತೇನೆ.

ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ **-16** ರವರು ನನ್ನಿಂದ ಪಡೆದಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್. ಎಂ ವಕೀಲರಿಂದ</u>**

ಚಾಸಾ **-1** ರವರು ನನಗೆ ನಿಪಿಃ **1** ರಂತೆ ದೂರು ನೀಡಿರಲಿಲ್ಲ ಅಂದರೆ ಸರಿಯಲ್ಲ. ಸದರಿ ದೂರಿನಲ್ಲಿ ವಿನಾಕಾರಣ ಆರೋಪಿಯ ಹೆಸರನ್ನು ಬರೆಯಲಾಗಿದೆ ಅಂದರೆ ಸರಿಯಲ್ಲ. ಚಾಸಾ **-2** ಮತುತ **3** ರವರ ಸಮಕ್ಷಮ ಸುಳ್ಳು ಪಂಚನಾಮೆ ಮಾಡಿರುತತೇನೆ ಅಂದರೆ ಸರಿಯಲ್ಲ. ಚಾಸಾ **-6** ರಿಂದ **8, 11**

**CC 10005/2024**

ಮತ್ತು 14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ -14 ರವರಿಂದ ಪುರಮಾಣ ಪತ್ರ ಪಡೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ವಿನಾಕಾರಣ ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.